## ಅತಿ ಸಣ್ಣಕಥೆಗಳು




### ಯೋಗೀಂದ್ರ ಮರವಂತೆ

ಕಲೆ: ಸೌಮ್ಯ ಪ್ರಭು ಕಲ್ಯಾಣ್‌ಕರ್


# ನೂರನೆಯ ಕಥೆ

ಪ್ರಸಿದ್ಧ ಕಥೆಗಾರನೊಬ್ಬನಿಗೆ ಒಂದು ಕಥೆ ಬರೆಯಲಾರಂಭಿಸಿದ ಕೂಡಲೇ ನಿದ್ದೆ ಬಂದುಬಿಡುತ್ತಿತ್ತು; ಆದರೆ ನಿದ್ದೆಯಲ್ಲಿ ಕಲ್ಪನೆಯೊಂದು ಗರಿಗೆದರುತ್ತಿದ್ದ ಕನಸು ಬೀಳುತ್ತಿತ್ತು. ಅವನು ಬರೆಯತೊಡಗಿದ್ದ ಕಥೆಯ ಮುಂದುವರಿಕೆಯೇ ಆಗಿದ್ದ ಆ ಕನಸು ಬೆಳಗ್ಗೆ ಎದ್ದಾಗ ಸರಿಯಾಗಿ ನೆನಪಿಗೆ ಬರುತ್ತಿರಲಿಲ್ಲ. ಕಥೆಗಾರ ಅದುವರೆಗೆ ಸಾವಿರಾರು ಕಥೆಗಳನ್ನು ಓದಿದ್ದವನು; ತಾನೇ ತೊಂಬತ್ತೊಂಬತ್ತು ಕಥೆಗಳನ್ನೂ ಬರೆದಿದ್ದವನು; ಈಗ ಬರೆಯತೊಡಗಿದ್ದ ನೂರನೆಯ ಕಥೆಯನ್ನು ಹೇಗಾದರೂ ಮಾಡಿ ಕನಸಿನಿಂದ ವಾಸ್ತವಕ್ಕೆ ತರಬೇಕೆಂದು ಪ್ರಯತ್ನಿಸುತ್ತಿದ್ದನು. ಆ ಕಥೆಗೋ ವಾಸ್ತವದಲ್ಲಿ ಸ್ವಪ್ನದಂತೆಯೂ ಸ್ವಪ್ನದಲ್ಲಿ ವಾಸ್ತವದಂತೆಯೂ ಇರುವುದು, ಎಚ್ಚರ ಇದ್ದಾಗ ಸುಮ್ಮನಿದ್ದು ನಿತ್ಯವೂ ಕನಸಿನಲ್ಲಿಯೇ ಮುಂದುವರಿಯುವ ಹಟ.

ಮೊದಮೊದಲು, ಕೈಗೆ ಸಿಗದ ಎಂತಹ ಅಪೂರ್ವ ಜೀವಂತ ಕಥೆ ಎಂದುಕೊಂಡ ಕಥೆಗಾರ. ನಂತರ, ಇಷ್ಟು ಅಪೂರ್ವವಾದ ಕಥೆ ತನ್ನನ್ನು ಸತಾಯಿಸುತ್ತಿದೆಯಲ್ಲ ಎಂದು ಕೈಕೈ ಹೊಸಕಿಕೊಂಡ. ಕಥೆ ಕನಸಿನಲ್ಲಿ ನಡೆಯುತ್ತಿರುವಾಗಲೇ ಅದನ್ನು ಬರೆದಿಟ್ಟುಕೊಂಡರೆ ಹೇಗೆ? ವಿಪರ್ಯಾಸವೆಂದರೆ ಅವನಿಗೆ ಕನಸಿನಲ್ಲಿ ಹಾಗೆ ಬರೆದಿಟ್ಟುಕೊಳ್ಳಬೇಕೆಂಬ ನೆನಪೇ ಕೈಕೊಡುತ್ತಿದ್ದುದು.

ಕಥೆಗಾರನಿಗೆ ತಾನು ಅದುವರೆಗೆ ಬರೆದುದೆಲ್ಲವೂ ವ್ಯರ್ಥ, ಕನಸಿನಲ್ಲಿ ಮೂಡುತ್ತಿದ್ದ ಕಥೆಯೇ ನಿಜಕ್ಕೂ ಶ್ರೇಷ್ಠ ಅನಿಸಿತ್ತು. ಅದೇನಾದರೂ ಕಾಗದದ ಮೇಲೆ ಮೂಡಿ ಬಂದರೆ ಇಡೀ ಸಾಹಿತ್ಯಲೋಕದಲ್ಲೇ ಒಂದು ಕ್ರಾಂತಿ ಆಗುವುದರಲ್ಲಿ ಸಂಶಯ ಇಲ್ಲ. ಹಾಗಾಗಿ ತನ್ನ ಕಥೆಗಳನ್ನು ಮೆಚ್ಚಿಕೊಂಡಿದ್ದ ವೈದ್ಯರೊಬ್ಬರನ್ನು ಕಂಡು ಸಮಸ್ಯೆ ಹೇಳಿಕೊಂಡ. ಅವನು ಹೇಳಿದ್ದನ್ನೆಲ್ಲ ಕೇಳಿಸಿಕೊಂಡ ವೈದ್ಯರು ಉಕ್ಕಿಬರುತ್ತಿದ್ದ ನಗುವನ್ನು ತಡೆದುಕೊಳ್ಳಲಾಗದೇ ಕಪಾಟಿನಿಂದ ಎಳೆದುಕೊಂಡ ಒಂದು ಪುಸ್ತಕದಲ್ಲಿ ಸ್ವಲ್ಪ ಹೊತ್ತು ತಮ್ಮ ಮುಖವನ್ನು ಹುದುಗಿಸಿದರು. ಆಮೇಲೆ ತಮ್ಮ ಸೀಟಿಗೆ ಮರಳಿದವರು, ಕನಸು ಮರೆತುಹೋಗುವುದು ಸ್ವಾಭಾವಿಕವಾದ್ದರಿಂದ ಮಲಗಿದ ಒಂದು ಗಂಟೆಯ ನಂತರಕ್ಕೆ ಅಲಾರಂ ಇಡಲು ಸೂಚಿಸಿದರು. ಕಥೆಗಾರನಿಗೆ ಮಲಗಿದ ಕೂಡಲೇ ಕನಸು ಬೀಳುವುದರಿಂದ ಒಂದು ಗಂಟೆಯ ನಂತರ ಎಚ್ಚರವಾದರೆ ಅಲ್ಲಿಯತನಕದ ಕನಸು ಸ್ಪಷ್ಟವಾಗಿ ನೆನಪಿರುವುದೆಂಬುದು ಅವರ ಅಂಬೋಣ.

ಖುಷಿಯಲ್ಲಿ ಮರಳಿದ ಕಥೆಗಾರ ಅಂದು ರಾತ್ರಿ ಇನ್ನೇನು ನಿದ್ದೆ ಬರುತ್ತಿದೆ ಎನ್ನುವಾಗ ಮನೆಯಲ್ಲಿರುವ ಹಳೆಯ ಗಡಿಯಾರದ ಮುಳ್ಳು